ಅ) 1995-96ನೇ ಸಾಲಿನಲ್ಲಿ ನಗರ ನೀರು ಸರಬರಾಜು ಹಾಗೂ ಒಳಚರಂಡಿ ನಿರ್ಮಾಣಕ್ಕಾಗಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸರ್ಕಾರದಿಂದ ಮಂಜೂರಾದ ಹಣವೆಷ್ಟು? ಈ ಪೈಕಿ ಖರ್ಚಾದ ಹಣವೆಷ್ಟು ; (ಕ್ಷೇತ್ರವಾರು ಕಾಮಗಾರಿವಾರು ವಿವರ ನೀಡುವುದು).

ಆ) ಒಳಚರಂಡಿ ಹೊಂದಿರುವ ಪ್ರದೇಶಗಳನ್ನು ಗುರುತಿಸಲಾಗಿದಯೇ? ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) 1995-96ನೇ ಸಾಲಿನಲ್ಲಿ ನಗರ ನೀರು ಸರಬರಾಜು ಮತ್ತು ಒಳಚರಂಡಿಗಳಿಗಾಗಿ ಹುಬ್ಬಳ್ಳಿ-ಧಾರವಾಡ ಅವಳಿ ಪಟ್ಟಣಗಳಿಗೆ ಈ ಕೆಳಕಂಡಂತೆ ಹಣವನ್ನು ಒದಗಿಸಲಾಗಿದೆ:

1. ಹುಬ್ಬಳ್ಳಿ-ಧಾರವಾಡ ಹಲಸಂಗ್ರಹಾಲಯ ಮತ್ತು ವಿತರಣಾ ಜಾಲ ನವೀಕರಣ ಕೆಲಸಕ್ಕೆ ಹುಡ್ಕೋದಿಂದ ರೂ. 114.73 ಲಕ್ಷಗಳು ಒದಗಿಸಲಾಗಿದ್ದು, ಮಂಡಳಿಯು ರೂ. 127.04 ಲಕ್ಷಗಳನ್ನು ಖರ್ಚು ಮಾಡಿದೆ.

2. ಹುಬ್ಬಳ್ಳಿ-ಧಾರವಾಡ ನಗರಕ್ಕೆ ಮಲಪ್ರಭಾ ಎರಡನೇ ಹಂತದ ನೀರು ಸರಬರಾಜಿಗೆ ರೂ. 41.44 ಲಕ್ಷಗಳು ಹುಡ್ಕೋದಿಂದ ಹಾಗೂ ರೂ. 66.66 ಲಕ್ಷಗಳು ಸ್ಥಳೀಯ ಸಂಸ್ಥೆಯಿಂದ ಒದಗಿಸಲಾಗಿತ್ತು. ಈ ಪೈಕಿ ರೂ. 1.01 ಲಕ್ಷಗಳು ಖರ್ಚಾಗಿವೆ.

   ಈ ಯೋಜನೆಯನ್ನು ಒಟ್ಟಾರೆಯಾಗಿ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಕೈಗೊಂಡಿರುವುದರಿಂದ ಕ್ಷೇತ್ರವಾರು: ಕಾಮಗಾರಿವಾರು ವಿವರ ಲಭ್ಯವಿರುವುದಿಲ್ಲ.

   ಮೇಲಿನ ಯೋಜನೆಗಳಿಂದ ಹುಬ್ಬಳ್ಳಿ-ಧಾರವಾಡ ಅವಳಿ ಪಟ್ಟಣಗಳಿಗೆ ಹೆಚ್ಚಿನ ನೀರು ಸರಬರಾಜನ್ನು ಮಾಡಲು ಅನುವಾಗಿದೆ.

ಆ) ಒಳಚರಂಡಿ ಹೊಂದಿರದ ಪ್ರದೇಶಗಳನ್ನು ಗುರುತಿಸಿ, 1988-89ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ನೆರವಿಗಾಗಿ 53.2 ಲಕ್ಷ ರೂ.ಗಳ ಅಂದಾಜನ್ನು ತಯಾರಿಸಲಾಗಿದೆ. ಅದಕ್ಕೆ ಸರ್ಕಾರದ ಮಂಜೂರಾತಿ ದೊರೆಯಲಿಲ್ಲ. ಈಗ ಈ ಯೋಜನೆಗೆ ಸಮರ್ಪಕ ವರದಿಯನ್ನು ಸಮಾಲೋಚಕರವರಿಂದ (ಕನ್ಸಲ್ಟೆಂಟ್) ಪಡೆದು ಹೊರಗಡೆಯಿಂದ ಆರ್ಥಿಕ ಸಹಾಯವನ್ನು ಪಡೆಯಲು ಪ್ರಸ್ತಾಪಿಸಲಾಗುವುದು.

ವಿಷಯ:- 1995-96ನೇ ಸಾಲಿನಲ್ಲಿ ಹಾನಿಗೀಡಾದ ಕಬ್ಬಿನ ಪ್ರಮಾಣ.

29(135)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1995-96ನೇ ಸಾಲಿನಲ್ಲಿ ಅರೆಯದೆ ಹಾನಿಗೀಡಾದ ಕಬ್ಬಿನ ಪ್ರಮಾಣವೆಷ್ಟು; ಈ ಬಗ್ಗೆ ಸರ್ಕಾರ ಪರಿಹಾರ ನೀಡಲು ಕ್ರಮ ಕೈಗೊಂಡಂತೆ ಹಾಗಿದ್ದಲ್ಲಿ ವಿವರ ನೀಡುವುದು;

ಆ) ಕಳೆದ ಬಾರಿಯಂತೆ ಈ ಬಾರಿಯು ಕಬ್ಬು ಹಾನಿಗೀಡಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಸರ್ಕಾರ ಕೈಗೊಂಡಿದೆಯೆ; ಹಾಗಿದ್ದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಗಳನ್ನೊದಗಿಸುವುದು?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) 1995-96ನೇ ಸಾಲಿನಲ್ಲಿ ಅರೆಯದೆ ಉಳಿದ ಕಬ್ಬಿನ ಪ್ರಮಾಣ ಸುಮಾರು 4 ಲಕ್ಷ ಟನ್ ಆಗಿದ್ದು, ಸದರಿ ಕಬ್ಬನ್ನು ಪ್ರಸಕ್ತ ಹಂಗಾಮಿಯಲ್ಲಿ ಅರೆಯುವಂತೆ ಕಾರ್ಖಾನೆಗಳಿಗೆ ಸೂಚನೆ ನೀಡಲಾಗಿತ್ತು. ಆ ಪ್ರಕಾರ ಈಗಗಾಗಲೇ ಸುಮಾರು 3.50 ಲಕ್ಷ ಟನ್ ಕಬ್ಬನ್ನು ನುರಿಸಲಾಗಿದೆ. ಸರ್ಕಾರದ ಮುಂದೆ ಆರ್ಥಿಕ ಪರಿಹಾರ ನೀಡುವ ಪ್ರಸ್ತಾವನೆ ಇರುವುದಿಲ್ಲ.

ಆ) ಈ ಹಂಗಾಮಿನಲ್ಲಿ ಬೆಲ್ಲದ ಬೆಲೆ ಏರಿಕೆಯಾಗಿದ್ದು ಕಳೆದ ಬಾರಿಗಿಂತ ಅಧಿಕ ಪ್ರಮಾಣದಲ್ಲಿ ಕಬ್ಬು ಬೆಲ್ಲ ತಯಾರಿಕೆಗೆ ಹೋಗುತ್ತಿದೆ. ಇದರಿಂದಾಗಿ ಕಳೆದ ಸಾಲಿನಂತೆ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿ ಕಬ್ಬಿನ ಸಮಸ್ಯೆ ಕಂಡುಬರುತ್ತಿಲ್ಲ. ರಾಜ್ಯದ ಹಲವು ಭಾಗಗಳಲ್ಲಿ ಹೆಚ್ಚುವರಿ ಲಭ್ಯವಿರುವ ಕಬ್ಬನ್ನು ಕೊರತೆ ಇರುವ ಸಕ್ಕರೆ ಕಾರ್ಖಾನೆಗಳು ಸಾಗಾಣಿಕೆ ಮಾಡಲು ಸೂಚಿಸಲಾಗಿದೆ. ಹಾಗೂ ಸ್ಥಳೀಯ ಬೇಡಿಕೆಗಿಂತ ಅಧಿಕವಿರುವ ಭಾಗಗಳಲ್ಲಿ ರೈತರ ಹಿತದೃಷ್ಟಿಯಿಂದ ನೆರೆ ರಾಜ್ಯಕ್ಕೆ ಸಾಗಾಣಿಕೆ ಮಾಡಲು ಅನುಮತಿಸಲಾಗಿದೆ.

ವಿಷಯ:- ಭಾರಿ ಹಾಗೂ ಮಧ್ಯಮ ಪ್ರಮಾಣದ ಕಾರ್ಖಾನೆಗಳು.

31(133)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) 1995-96 ಹಾಗೂ 1996-97ನೇ ಸಾಲುಗಳಲ್ಲಿ ಪ್ರಾರಂಭಗೊಳ್ಳಲು ಮಂಜೂರಾತಿ ಪಡೆದ ಭಾರಿ ಹಾಗೂ ಮಧ್ಯಮ ಪ್ರಮಾಣದ ಕಾರ್ಖಾನೆಗಳ ಸಂಖ್ಯೆ ಎಷ್ಟು, ಈ ಪೈಕಿ ಸರ್ಕಾರಿ ಉದ್ದಿಮೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರಗಳನ್ನೊದಗಿಸುವುದು);

ಆ) ಈ ಉದ್ದಿಮೆಗಳಲ್ಲಿ ಸ್ಥಳೀಯ ನಿರುದ್ಯೋಗ ಯುವಕರಿಗೆ ಉದ್ಯೋಗ ನೀಡಬೇಕೆಂದು ಷರತ್ತುನ್ನು ಸರ್ಕಾರ ಹಾಕಿದೆಯೆ;

ಇ) ಹಾಗಿದ್ದಲ್ಲಿ ಸ್ಥಳೀಯರಿಗೆ ಉದ್ಯೋಗ ದೊರಕಿಸಿಕೊಡಲು ಸರ್ಕಾರ ಕೈಗೊಳ್ಳಲು ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು):-

ಅ) 1995-96 - 175
1996-97 - 123
(31.1.97 ವರೆಗೆ)